# FWA management Awareness workshop at Davanagere



ದಾವಣಗೆರೆ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಭಾರತೀಯ ಅನುಸಂದಾನ ಪರಿಷತ್- ರಾಷ್ಟ್ರಿಯ ಕೃಷಿ ಕೀಟ ಸಂಪನ್ಮೂಲಗಳ ಬ್ಯೂರೋ ಸಹಯೋಗದಲ್ಲಿ ಲದ್ದಿ ಹುಳು ಹಾವಳಿಯ ನಿಯಂತ್ರಣ ಕುರಿತು ಒಂದು ದಿನದ ರೈತರ ಮತ್ತು ಕೃಷಿ ವಿಜ್ಞಾನಿಗಳ ಸಮ್ಮೇಳನ ನಡೆಸಲಾಯಿತು.

Kannada Prabha

# ಲದ್ದಿ ಹುಳು ಮೆಕ್ಕೆಜೋಳ ಬೆಳೆಗಾರರ ನಿದ್ದೆ ಗೆಡಿಸುತ್ತಿದೆ

2019-8-28 16:13

## ಲದ್ದಿ ಹುಳು ನಿರ್ವಹಣೆ ಕಾರ್ಯಾಗಾರದಲ್ಲಿ ಬೆಂಗಳೂರು ಐಸಿಎಆರ್-ಎಟಿಎಆರ್‌ಐ ನ ನಿರ್ದೇಶಕ ಡಾ. ಚಂದ್ರೇಗೌಡ

ದಾವಣಗೆರೆ, ಆ.27- ಒಂದು ಕಾಲಕ್ಕೆ ಮೆಕ್ಕೆಜೋಳ ಸೋಮಾರಿಗಳ ಬೆಳೆ ಎಂದು ಪ್ರಸಿದ್ಧಿಯಾಗಿತ್ತು. ಆದರೆ ಈಗ ರೈತರ ನಿದ್ದೆ ಗೆಡಿಸಿದೆ. ಆದಕ್ಕೆ ಕಾರಣ ಲದ್ದಿಹುಳು/ಫಾಲ್ ಸೈನಿಕ ಹುಳು ( ಎಲೆ ಸುಳಿ ಸೈನಿಕ ಹುಳು)ವಾಗಿದೆ ಎಂದು ಬೆಂಗಳೂರು ಐಸಿ ಎಆರ್-ಎಟಿಎಆರ್‌ಐ ನ ನಿರ್ದೇಶಕ ಡಾ. ಎಂ.ಜೆ. ಚಂದ್ರೇಗೌಡ ಹೇಳಿದರು.

ಅವರು ಐಸಿಎಆ ರ್ -ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾ ವಣಗೆರೆ, ಐಸಿಎಆರ್- ಎಟಿಎಆರ್‌ಐ ಝೋನ್-XI, ಐಸಿಎಆರ್-ಎನ್‌ಬಿಎಐಆರ್ ಬೆಂಗಳೂರು ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಫಾಲ್ ಸೈನಿಕ ಹುಳು ನಿರ್ವಹಣೆ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಸಮಾಧಾನದ ವಿಷಯವೆಂದರೆ ಕೃಷಿ ಲದ್ದಿಹುಳು ನಿಯಂತ್ರಣಕ್ಕೆ ಇಲಾಖೆ ಸಾಕಷ್ಟು ಪ್ರಯತ್ನ ಪಡುತ್ತಿದೆ. ಲದ್ದಿ ಹುಳು ಹತೋಟಿಗೆ ಬೇಕಾದ ಮಾರ್ಗದರ್ಶನ, ಸಲಹೆ, ಮಾಹಿ ತಿಗಳನ್ನು ರೈತರಿಗೆ ತಲುಪಿಸುವಲ್ಲಿ , ಪ್ರಚಾರ ಮಾಡುವಲ್ಲಿ ಬಹಳಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲಗಳ ಬ್ಯೂರೋ-ಬೆಂಗಳೂರು ಈ ನಿಟ್ಟಿನಲ್ಲಿ ಹೆಚ್ಚಿನ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಪ್ರಸ್ತುತ ಪಾರ್ಥೇನಿಯಂನ ಕಳೆ ನಿರ್ಮೂಲನಾ ಸಪ್ತಾಹ ಆಚರಿಸಲಾಗುತ್ತಿದೆ. ಪಾರ್ಥೇನಿಯಂ ಹೂ ಬರುವ ಮೊದಲು ಗೊಬ್ಬರವಾಗಿ, ಕೀಟನಾಶಕವಾಗಿ ಉಪಯೋಗಕ್ಕೆ ಬರುತ್ತದೆ. ಹೂ ಬಂದ ನಂತರ ರೈತನ ಶತ್ರುವಾಗುತ್ತದೆ. ಇನ್ನು ನೀರು ನಮ್ಮ ಜೀವ. ನೀರಿಲ್ಲದೆ ಯಾವ ಕೃಷಿಯೂ ಇಲ್ಲ. ಮಳೆ ನೀರು ಸಂಗ್ರಹಿಸುವ ಅವಶ್ಯಕತೆ ಇದ್ದು, ಈ ನಿಟ್ಟಿನಲ್ಲಿ ಶ್ರೀ ತರಳಬಾಳು ಜಗದ್ಗುರುಗಳು ಅತ್ಯುತ್ತಮ ಕೆಲಸ ಮಾಡುತ್ತಿದ್ದಾರೆ. ಅವರ ಮಾರ್ಗದರ್ಶನದಲ್ಲಿ ನಾವು ಮುಂದೆ ಹೋಗುತ್ತಿರುವುದು ನಮ್ಮ ಪುಣ್ಯ ಎಂದರು.



ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವಲಯ ಮಟ್ಟದಲ್ಲಿ 48 ಕೃಷಿ ಕೇಂದ್ರಗಳನ್ನು ಹಿಂದಿಕ್ಕಿ ,ಅತ್ಯುತ್ತಮ ಕೃಷಿ ವಿಜ್ಞಾನ ಕೇಂದ್ರ ಎಂದು ರಾಷ್ಟ್ರ ಪ್ರಶಸ್ತಿಗೆ ಪಾತ್ರವಾಗಿದೆ. ಇದಕ್ಕೆ ಕಾರಣೀಭೂತರಾದ ಶ್ರೀಗಳಿಗೆ, ಜಿಲ್ಲೆಯ ಪ್ರತಿ ರೈತರಿಗೆ , ಸಹಕಾರ ನೀಡಿದ ಎಲ್ಲಾ ಸಹ ಇಲಾಖೆಗಳಿಗೆ ಧನ್ಯವಾದ ತಿಳಿಸುತ್ತೇನೆ ಎಂದರು.

ದಾವಣಗೆರೆ ಕೃಷಿ ಇಲಾಖೆ ಡಿಡಿಎ ತಿಪ್ಪೇಸ್ವಾಮಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿ ದಾವಣಗೆರೆ ಜಿಲ್ಲೆಯ ಪ್ರಮುಖ ಬೆಳೆ ಮೆಕ್ಕೆಜೋಳವಾಗಿದ್ದು, 2 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ (5 ಲಕ್ಷ ಎಕರೆ) ಬೆಳೆಯಲಾಗುತ್ತಿದೆ. ಮೆಕ್ಕೆಜೋಳ ಒಳ್ಳೆ ಬೆಳೆಯೇ ಆದರೆ ಅಕ್ಕಡಿ ಬೆಳೆ ಬೆಳೆದರೆ ರೈತನಿಗೆ ಉಪಯೋಗ. ಬರೀ ಮೆಕ್ಕೆಜೋಳ ಹಾಕುವುದರಿಂದ ಹುಳುಗಳ ಕಾಟ ಹೆಚ್ಚಾಗಿ ನಷ್ಟವಾಗುತ್ತಿದೆ. ಈಗ ಲದ್ದಿಹುಳುವಿನ ಬಾಧೆ ಎದುರಾಗಿದೆ ಎಂದರು.

ರೈತರು ಕೀಟ ತೊಂದರೆ ಎದುರಾದಾಗ ತಕ್ಷಣ ಕೃಷಿ ಕೇಂದ್ರಗಳನ್ನು ಸಂಪರ್ಕಿಸಬೇಕು. ಸಾಮೂಹಿಕ ಹತೋಟಿ ಕ್ರಮಕ್ಕೆ ಮುಂದಾಗಬೇಕು. ರೈತ ಸಂಪರ್ಕ ಕೇಂದ್ರಗಳಲ್ಲಿ ಔಷಧಿ ದೊರಕುತ್ತದೆ. ಈ ವಿಷಯವನ್ನು ನೀವು ಅರಿತು, ಇತರರಿಗೂ ತಲುಪಿಸುವ ಕೆಲಸ ಮಾಡಿರಿ. ಯಶಸ್ವಿ ರೈತನ ತಾಂತ್ರಿಕತೆಯನ್ನು ನಕಲು ಮಾಡಿ, ನಿಮ್ಮ ಫಸಲನ್ನು ಹೆಚ್ಚಿಸಿಕೊಳ್ಳಿರಿ ಎಂದರಲ್ಲದೆ, ಜಲ ಶಕ್ತಿ ಅಭಿಯಾನದ ಕುರಿತು ಮಾಹಿತಿ ನೀಡಿದರು.

ವೇದಿಕೆ ಅಧ್ಯಕ್ಷತೆಯನ್ನು ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ಟಿ.ಎನ್. ದೇವರಾಜ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಬೆಂಗಳೂರು ಎನ್‌ಬಿಎಐಆರ್‌ನ ವಿಜ್ಞಾನಿಗಳಾದ ಡಾ. ಎನ್. ಶೈಲೇಶ್, ಡಾ. ಶಿವಕುಮಾರ್, ಡಾ. ಗಾಂಧೀ ಗ್ರೇಸಿ ಆಗಮಿಸಿದ್ದು, ಲದ್ದಿಹುಳು ಕುರಿತು ರೈತರಿಗೆ ಮಾಹಿತಿ ನೀಡಿದರು. ಚಿತ್ರದುರ್ಗ ಕೃಷಿ ಕೇಂದ್ರದ ಮುಖ್ಯಸ್ಥ ಡಾ. ಓಂಕಾರಪ್ಪ, ಕತ್ತಲಗೆರೆ ಕೃಷಿ ವಿಜ್ಞಾನ ಕೇಂದ್ರದ ರಾಮಪ್ಪ ಪಾಟೀಲ್ ಉಪಸ್ಥಿತರಿದ್ದರು.

ಪ್ರಾರ್ಥನೆ ಹಾಗೂ ಸ್ವಾಗತವನ್ನು ಡಾ. ಟಿ.ಎನ್. ದೇವರಾಜ್ ಮಾಡಿದರು. ಕೇಂದ್ರದ ವಿಜ್ಞಾನಿಗಳಾದ ಹೆಚ್. ಎಂ. ಸಣ್ಣಗೌಡ್ರು ವಂದಿಸಿದರು. ಬಿ.ಓ. ಮಲ್ಲಿಕಾರ್ಜುನ ನಿರೂಪಿಸಿದರು.

Prajavani

**ರೈತರಿಗೆ ಸಲಹೆ** ಬೆಂಗಳೂರಿನ ಐಸಿಎಆರ್ ನಿರ್ದೇಶಕ ಡಾ.ಎಂ.ಜೆ.ಚಂದ್ರೇಗೌಡ

# ಲದ್ದಿ ಹುಳು ಹಾವಳಿಯಿಂದ ರೈತರು ತೀವ್ರ ನಷ್ಟ

ದಾವಣಗೆರೆ: ಇತ್ತೀಚಿನ ವರ್ಷಗಳಲ್ಲಿ ಮೆಕ್ಕೆಜೋಳ ಮತ್ತು ವಿವಿಧ ಬೇಸಾಯ ಬೆಳೆಗಳಲ್ಲಿ ಲದ್ದಿ ಹುಳುಗಳಿಂದ ಸಾಕಷ್ಟು ಹಾನಿಯಾಗಿದ್ದು, ರೈತರು ತುಂಬಾ ನಷ್ಟ ಅನುಭವಿಸುತ್ತಿದ್ದಾರೆ ಎಂದು ಬೆಂಗಳೂರಿನ ಐಸಿಎಆರ್ ನಿರ್ದೇಶಕ ಡಾ.ಎಂ.ಜೆ.ಚಂದ್ರೇಗೌಡ ಹೇಳಿದರು. ಇಲ್ಲಿನ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ಬೆಂಗಳೂರಿನ ಭಾರತೀಯ ಅನುಸಂದಾನ ಪರಿಷತ್, ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲಗಳ ಬ್ಯೂರೋ ಸಹಯೋಗದಲ್ಲಿ ಆಯೋಜಿಸಿದ ಲದ್ದಿ ಹುಳು ಹಾವಳಿಯ ನಿಯಂತ್ರಣ ಕುರಿತ ಒಂದು ದಿನದ ರೈತರ ಮತ್ತು ಕೃಷಿ ವಿಜ್ಞಾನಿಗಳ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಈ ವಿಚಾರವಾಗಿ ಕೃಷಿ ವಿಜ್ಞಾನ ಕೇಂದ್ರ ಕೃಷಿ ಇಲಾಖೆ ಸಹಯೋಗದಲ್ಲಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ರೈತರಿಗೆ ಮಾಹಿತಿ ನೀಡುತ್ತಿದೆ ಎಂದರು. ಬೆಂಗಳೂರಿನ ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲಗಳ ಬ್ಯೂರೋ ಪ್ರಧಾನ ವಿಜ್ಞಾನಿ ಡಾ.ಎನ್.ಶೈಲೇಶ್, ಡಾ. ಶಿವಕುಮಾರ, ಡಾ.ಗಾಂಧಿಗ್ರೇಸಿ, ಕೃಷಿ ಉಪನಿರ್ದೇಶಕ ತಿಪ್ಪೇಸ್ವಾಮಿ, ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು, ಚಿತ್ರದುರ್ಗ ಜಿಲ್ಲೆ ಬಬ್ಬೂರು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು, ಮುಖ್ಯಸ್ಥರು ಭಾಗವಹಿಸಿದ್ದರು.




ದಾವಣಗೆರೆಯ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ಲದ್ದಿ ಹುಳು ಹಾವಳಿ ನಿಯಂತ್ರಣ ಕುರಿತು ಕಾರ್ಯಾಗಾರ ನಡೆಯಿತು.

Scanned with CamScanner

Vijaya vaani